ಅಸಲು ದಾವಾ ನಂಃ 40/2025
ಪಿ ಡಬ್ಲ್ಯುಃ01

**<u>ದಿನಾಂಕಃ 11-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಮುಂದುವರೆದ ಮುಖ್ಯವಿಚಾರಣೆಃ ವಾದಿಯ ಪರ ಶ್ರೀ ಎಂ.ಎಸ್.ಬಿ. ವಕೀಲರಿಂದಃ</u>

ನಾನು ಈ ದಿನ ದಿನಾಂಕಃ 01.10.2022 ರ ಕ್ರಯದ ಕರಾರು ಪತ್ರ ಹಾಜರುಪಡಿಸುತ್ತಿದ್ದು, ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಸಾಕ್ಷಿ ತಮ್ಮ ಯಜಮಾನರ 11 ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2(ಎ) ಯಿಂದ 2(ಕೆ) ಎಂದು ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಲ್ಲಿ ಬರೆದ ಷರಾದಲ್ಲಿ ತಮ್ಮ ಯಜಮಾನರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಎಲ್) ಎಂದು ಗುರುತಿಸಲಾಯಿತು. ಸದರಿ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಹರೀಶ್, ಇಲಿಯಾಸ್ ಅವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಪ್ರಕಾಶ್ ಎನ್ನುವವರು ಒಪ್ಪಿ ಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದರಿ ನಿಪಿ-2 ಕರಾರು ಪತ್ರವನ್ನು ನವೀನ್ ರಾವ್ ಎಂಬ ವಕೀಲರು ತಯಾರಿಸಿರುತ್ತಾರೆ. ನಿಪಿ-2 ಕ್ಕೆ ಪ್ರತಿವಾದಿಯರು ತಮ್ಮ ಸಹಿಗಳನ್ನು ಮಾಡಿರುತ್ತಾರೆ. ದಿನಾಂಕಃ 29.08.2025 ರಂದು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟೀಸ್ ಪ್ರತಿ ಹಾಜರುಪಡಿಸುತ್ತಿದ್ದು ನಿಪಿ-3 ಎಂದು. 10 ಅಂಚೆ ರಶೀದಿಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-13 ಎಂದು ಗುರುತಿಸಲಾಯಿತು. 7 ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸುತ್ತಿದ್ದು ನಿಪಿ-14 ರಿಂದ ನಿಪಿ-20 ಎಂದು ಗುರುತಿಸಲಾಯಿತು. ಜಾರಿಯಾಗದೆ ಬಂದ ಅಂಚೆ ಲಕೋಟೆಗಳನ್ನು ಈಗ ತೆರೆದ ನ್ಯಾಯಾಲಯದಲ್ಲಿ ನೋಡಲಾಗಿ ಸದರಿ ಅಂಚೆ ಲಕೋಟೆಗಳನ್ನು ನಿಪಿ-21 ಮತ್ತು 22 ಎಂದು ಮತ್ತು ಅದರೊಳಗಿದ್ದ ನೋಟೀಸ್ ಪ್ರತಿಗಳನ್ನು ನಿಪಿ-21(ಎ) ಮತ್ತು 22(ಎ) ಎಂದು ಗುರುತಿಸಲಾಯಿತು. ದಿನಾಂಕಃ 15.09.2025 ರಂದು ಪ್ರತಿವಾದಿ 2 ರಿಂದ 4, 7 ಮತ್ತು 8 ರವರು ನೀಡಿದ ಪ್ರತ್ಯುತ್ತರ ನೋಟೀಸ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-23 ಎಂದು, ತಲಮಕ್ಕಿ ಗ್ರಾಮದ ಸರ್ವೆ ನಂ.55/3 ಇದರ ಪಹಣಿ ಪತ್ರಿಕೆ ಹಾಜರುಪಡಿಸುತ್ತಿದ್ದು ಅದನ್ನು ನಿಪಿ-24 ಎಂದು, ಉಪ ತಹಶೀಲ್ದಾರ್ ಕಸಬಾ ಹೋಬಳಿ ಇವರು ನೀಡಿದ ವಂಶವೃಕ್ಷದ ದೃಢೀಕರಣ

ಅಸಲು ದಾವಾ ನಂಃ 40/2025
ಪಿ ಡಬ್ಲ್ಯುಃ01

ಹಾಜರುಪಡಿಸುತ್ತಿದ್ದು ನಿಪಿ-25 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **8** ರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ
ನ.ರಾ.ಪುರ, ಸಂಚಾರಿ ನ್ಯಾಯಾಲಯ,
ಕೊಪ್ಪ.

ಸಾಕ್ಷಿದಾರರ ಸಹಿಃ